## ಅಣಬೆಯ ಬೆಡಗು

ಮಳೆಗಾಲದಲ್ಲಿ ನೆಲದಾಳದಿಂದ ಮೈತಳೆಯುವ ವೈವಿಧ್ಯಮಯ ಜೀವರಾಶಿಗಳು ಹಲವು. ಕೊಳೆತ ಗಿಡಮರಗಳ ಎಲೆ, ಕಸ ಮತ್ತು ಕೊಳೆತ ಪ್ರಾಣಿಗಳನ್ನು ಆಶ್ರಯಿಸಿ ಉತ್ಪತ್ತಿಯಾಗುವ ಶಿಲೀಂಧ್ರಗಳು ಪ್ರಾಣಿ ಅಥವಾ ಸಸ್ಯ ವರ್ಗ ಎರಡಕ್ಕೂ ಸೇರದ ಅಪರೂಪದ ಪರಾವಲಂಬಿ ಜೀವ ತಳಿಗಳೂ. ಅಂತಹ ಶಿಲೀಂಧ್ರಗಳಲ್ಲಿ ಅಣಬೆಯೂ ಪ್ರಮುಖವಾದುದು. ಅಚ್ಛ ಬಿಳುಪಿನ ಹಾಲ್ಬಣ್ಣದ ಈ ಅಣಬೆ ವೃತ್ತಾಕಾರದಲ್ಲಿದ್ದು ನಡುವೆ ವರ್ಲಿ ಅಥವಾ ಮಲೆನಾಡಿನ ಹಸೆ ಕಲೆಯಿಂದ ಚಿತ್ತಾರ ಬಿಡಿಸಿದಂತೆ ಮೂಡಿರುವ ಸಣ್ಣ ಸಣ್ಣ ಕಂದು ಚುಕ್ಕೆಗಳ ಆಕರ್ಷಕ ವಿನ್ಯಾಸದಿಂದ ಅದರ ಸೌಂದರ್ಯ ಇಮ್ಮಡಿಸಿ ಬೆರಗು ಮೂಡಿಸುತ್ತದೆ. ವೈದ್ಯ ಮಿತ್ರರು ಹಾಗೂ ಉತ್ತಮ ಹವ್ಯಾಸೀ ಛಾಯಾಗ್ರಾಹಕರೂ ಆದ ಡಾ. ಪ್ರಭಾಕರ ಕ್ಯಾಮೆರಾದಲ್ಲಿ ಕ್ಲಿಕ್ಕಿಸಿದ ಸೊಬಗಿನ ಅಣಬೆ ಚಿತ್ರಣವಿದು.

—ಕೆ. ರಾಮಕೃಷ್ಣ, ತೀರ್ಥಹಳ್ಳಿ







## ಐಫೆಲ್ ಟವರ್ ಪ್ರತಿಕೃತಿ

ಪ್ಯಾರಿಸ್‌ನ ಐಫೆಲ್ ಟವರ್ ಜಗತ್ತಿನ ಅದ್ಭುತಗಳಲ್ಲಿ ಒಂದು. ಈ ಅನನ್ಯವಾದ 'ಐಫೆಲ್ ಟವರ್ನ' ಪ್ರತಿಕೃತಿಯನ್ನು ಹರಿಹರದ ಮಕ್ಕಳು ನಿರ್ಮಿಸಿ ಮತ್ತೊಂದು ದಾಖಲೆ ನಿರ್ಮಿಸಿದ್ದಾರೆ. ಹರಿಹರದ ಎಂ.ಕೆ.ಇ.ಟಿ. ಶಾಲೆಯಲ್ಲಿ ನಡೆದ ವಸ್ತುಪ್ರದರ್ಶನದಲ್ಲಿ ಶಿಕ್ಷಕರ ಮಾರ್ಗದರ್ಶನದಲ್ಲಿ ಮಕ್ಕಳು ಮಾಡಿದ ನೂರಾರು ಕಲಾಕೃತಿಗಳು ವೀಕ್ಷಕರಿಗೆ ಮಾಹಿತಿ ನೀಡಿ ಗಮನ ಸೆಳೆಯುವಂತಿದ್ದರೂ ಚಿತ್ರಕಲಾ ವಿಭಾಗದಲ್ಲಿ ಪೂರ್ಣ ಮಾಹಿತಿಯೊಂದಿಗೆ ಪ್ರದರ್ಶಿಸಿದ್ದ ಐಫೆಲ್ ಟವರ್‌ನ ಮಿನಿಯೇಚರ್ ಎಲ್ಲರ ಮೆಚ್ಚುಗೆಗೆ ಪಾತ್ರವಾದದ್ದು ವಿಶೇಷ.

ಐಫೆಲ್ ಟವರ್‌ಗೆ 130 ವರ್ಷ ತುಂಬಿದ ನೆನಪಿಗೆ ಅಲ್ಲಿ ಲೇಸರ್ ಅಳವಡಿಸಿದ ಈ ಸಂದರ್ಭದಲ್ಲಿಯೇ ಇಲ್ಲಿಯೂ ಇದೇ ಟವರ್‌ನ ಪ್ರತಿಕೃತಿಯನ್ನು ಮಕ್ಕಳು ರಚಿಸಿದ್ದು ಕಾಕತಾಳೀಯವೂ ಆಗಿತ್ತು. ಇದರ ವಿನ್ಯಾಸದ ಹೊಣೆ ಹೊತ್ತವರು ಶಾಲೆಯ ಚಿತ್ರಕಲಾ ಶಿಕ್ಷಕ ರೇವಣಸಿದ್ಧಪ್ಪ. ನಾಲ್ಕು ಸ್ಥಂಭಗಳನ್ನೊಳಗೊಂಡ ಮೂರು ಮಾಳಿಗೆಯಿರುವ ಸುಮಾರು 984 ಅಡಿಗಳಿಗೂ ಎತ್ತರವಿರುವ ಕಬ್ಬಿಣದ ಐಫೆಲ್ ಗೋಪುರದ ಪ್ರತಿಕೃತಿಯನ್ನು 5 ಅಡಿ ಎತ್ತರಕ್ಕೆ ತಕ್ಕಂತೆ ಕರಾರುವಾಕ್ಕಾದ ಅಳತೆಯಲ್ಲಿ ರಚಿಸಿದ್ದಾರೆ. ಒಂದೇ ವ್ಯತ್ಯಾಸವೆಂದರೆ ಆ ಟವರ್ ಕಬ್ಬಿಣದ ಬಣ್ಣವಿದ್ದರೆ ಇದು ಬಿಳಿಯ ಬಣ್ಣದ್ದು. ಇದನ್ನು 5 ಎಂಎಂ ಅಳತೆಯ ಫೋಮ್ ಶೀಟ್ ಹಾಗೂ ಫೆವಿಕ್ವಿಕ್ ಬಳಸಿ ಸಿದ್ಧಗೊಳಿಸಿದ್ದಾರೆ.

—ಸೀತಾ ಎಸ್.

## ಹಳೇಬೀಡಿನ ಅಪರೂಪದ ರಂಗನಾಥ



ಹಳೇಬೀಡೆಂದರೆ ನೆನಪಾಗುವುದು ಹೊಯ್ಸಳೇಶ್ವರ ದೇವಾಲಯ. ಈ ದೇವಾಲಯಕ್ಕೆ ಬರುವ ಪ್ರವಾಸಿಗರು ಊರಿನ ಮಧ್ಯ ಭಾಗದಲ್ಲಿರುವ ರಂಗನಾಥ ದೇವಾಲಯವನ್ನು ಅಷ್ಟಾಗಿ ಗಮನಿಸುವುದಿಲ್ಲ. ಹೊಯ್ಸಳರ ಕಾಲದ ನಿರ್ಮಿತ ಈ ದೇವಾಲಯದಲ್ಲಿ ಶಯನ ಸ್ವರೂಪದಲ್ಲಿರುವ ಮೂರ್ತಿ ಇದೆ. ಮೂರ್ತಿ ಚತುರ್ಭುಜನಾಗಿದ್ದು ಪಾದದ ಬಳಿ ಶ್ರೀದೇವಿ ಮತ್ತು ಭೂದೇವಿ ಮೂರ್ತಿಗಳಿವೆ. ಪ್ರಭಾವಳಿಯಲ್ಲಿ ಸುಂದರ ದಶಾವತಾರದ ಕೆತ್ತನೆ ಇದೆ. ನಾಭಿಯಿಂದ ಬ್ರಹ್ಮ ಉದಯಿಸುವಂತೆ ಕಾಣುವ ಈ ಮೂರ್ತಿ ಮೂರು ಅಡಿ ಎತ್ತರದ ಪೀಠದ ಮೇಲಿದೆ. ನವರಂಗದಲ್ಲಿ ಸುಂದರ ರಾಮಾನುಜಾಚಾರ್ಯರ ಮೂರ್ತಿ ಇದೆ. ಈ ದೇವಾಲಯ ನವೀಕರಣಗೊಂಡಿದ್ದು, ಇಲ್ಲಿನ ಕಂಭಗಳಲ್ಲಿ ಇದ್ದ ಮೂರ್ತಿಗಳನ್ನು ಈಗ ಆವರಣದಲ್ಲಿ ಜೋಡಿಸಲಾಗಿದೆ. ಹಳೇಬೀಡಿಗೆ ಹೋದಾಗ ಇಲ್ಲಿಗೆ ಮರೆಯದೇ ಹೋಗಿ ಬನ್ನಿ.

—ಶ್ರೀನಿವಾಸ ಮೂರ್ತಿ ಎನ್. ಎಸ್. ಬೆಂಗಳೂರು